ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣ-ತುಂಗಆವರಣ, ಮಂತ್ರಾಲಯರಸ್ತೆ (ಎನ್.ಹೆಚ್. 167), ಯರಗೇರಾ-584133, ರಾಯಚೂರು, ಕರ್ನಾಟಕ

ಆಡಳಿತ ವಿಭಾಗ

E-mail: registrarrur@gmail.com Website: https://raichuruniversity.ac.in

ಕ್ರ.ಸಂ.ರಾವಿರಾ/ಆಡಳಿತ/ಸಿಂಸನ/2024-25/ ದಿನಾಂಕ: 25-10-2024

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ: 25.10.2024ರಂದು ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು — ಅಧ್ಯಕ್ಷರು
2. ಪ್ರೊ. ಪಿ. ಭಾಸ್ಕರ್, ಡೀನರು — ಸಿಂಡಿಕೇಟ್ ಸದಸ್ಯರು
3. ಶ್ರೀ. ಶಿವಬಸಪ್ಪ, ಮಾಲಿಪಾಟೀಲ — ಸಿಂಡಿಕೇಟ್ ಸದಸ್ಯರು
4. ಶ್ರೀ. ನಾಗೇಂದ್ರ ಪ್ರಸಾದ ಎ.ಎಂ., — ಸಿಂಡಿಕೇಟ್ ಸದಸ್ಯರು
5. ಡಾ. ಮೀನಾಕ್ಷಿ ಖಂಡಿಮಠ — ಸಿಂಡಿಕೇಟ್ ಸದಸ್ಯರು
6. ಶ್ರೀ ಡಿ.ಆರ್.ಚೆನ್ನ — ಸಿಂಡಿಕೇಟ್ ಸದಸ್ಯರು
7. ಶ್ರೀ ಜೀಶಾನ್ ಆಖಿಲ್ ಸಿದ್ದಿಖಿ — ಸಿಂಡಿಕೇಟ್ ಸದಸ್ಯರು
8. ಶ್ರೀ ಶಿವಣ್ಣ ತಂ: ಬುಡ್ಡಪ್ಪ ತಪ್ಪಲದೊಡ್ಡಿ — ಸಿಂಡಿಕೇಟ್ ಸದಸ್ಯರು
9. ಶ್ರೀ ಚನ್ನಬಸವ ತಂ: ಬಸವರಾಜಪ್ಪ — ಸಿಂಡಿಕೇಟ್ ಸದಸ್ಯರು
10. ಡಾ. ಪದ್ಮಾಕರ್ ಅಶೋಕ ಕುಮಾರ — ಸಿಂಡಿಕೇಟ್ ಸದಸ್ಯರು
11. ಶ್ರೀ ಪಾಂಡು — ಸಿಂಡಿಕೇಟ್ ಸದಸ್ಯರು
12. ಡಾ. ನಾಗರತ್ನ ಎಂ. ನಾಯ್ಕ್ — ಸಿಂಡಿಕೇಟ್ ಸದಸ್ಯರು
13. ಡಾ. ಇಕ್ಬಾಲ್ ಶೇಖ್ — ಸಿಂಡಿಕೇಟ್ ಸದಸ್ಯರು
14. ಪ್ರೊ. ಪಾರ್ವತಿ ಸಿ.ಎಸ್., — ಸಿಂಡಿಕೇಟ್ ಸದಸ್ಯರು
15. ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು(ಮೌಲ್ಯಮಾಪನ) — ಸಿಂಡಿಕೇಟ್ ಸದಸ್ಯರು
16. ಡಾ. ಶಂಕರ ವ್ಹಿ. ಕೆ.ಎ.ಎಸ್., (ಆಯ್ಕೆ ಶ್ರೇಣಿ) ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು

| ಕ್ರ.ಸಂ. | ಚರ್ಚೆ ಮಾಡುವ ವಿಷಯಗಳು | ಕೈಗೊಂಡ ನಿರ್ಣಯಗಳು |
|---|---|---|
| 1 | ದಿನಾಂಕ: 13.09.2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ: 13.09.2024ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಚರ್ಚಿಸಿದ ನಂತರ ಒಮ್ಮತದಿಂದ ಸಭೆಯು ನಡಾವಳಿಗಳನ್ನು ದೃಢೀಕರಿಸಲಾಗಿ ಅಂಗೀಕರಿಸಲಾಯಿತು. |
| 2 | ರಾಯಚೂರು ವಿಶ್ವವಿದ್ಯಾಲಯದ ಪಿಎಚ್‌ಡಿ ಪದವಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ ಕರಡು ವಿನಿಮಯಗಳಿಗೆ (Draft copy of "Raichur University Regulations Governing the Minimum Standards and Procedures for the award of Degree of Doctor of Philosophy (Ph.D))ಅನುಮೋದನೆ ನೀಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಪಿಎಚ್‌ಡಿ ಪದವಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಕಾರ್ಯವಿಧಾನಗಳ ನಿರ್ವಹಣೆಗೆ ಸಂಬಂಧಿಸಿದ ಕರಡನ್ನು (Draft copy of "Raichur University Regulations Governing the Minimum Standards and Procedures for the award of Degree of Doctor of Philosophy (Ph.D)) ಸರ್ಕಾರಕ್ಕೆ ಹಾಗೂ ಕುಲಾಧಿಪತಿಯವರ ಅನುಮೋದನೆಗೆ ಕಳುಹಿಸಲು ಸರ್ವಾನುಮತದಿಂದ ಅಂಗೀಕರಿಸಲಾಯಿತು. |

| | | |
|---|---|---|
| 3 | ಪ್ರಸ್ತುತ ಕುಲಪತಿಗಳ ಅವಧಿಯು ದಿನಾಂಕ: 08.11.2024ರಂದು ಅಂತ್ಯಗೊಳ್ಳಲಿರುವುದರಿಂದ ಕರ್ನಾಟಕರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ2000 ಪ್ರಕರಣ 14 (2) ರಡಿಯಲ್ಲಿ ನೂತನ ಕುಲಪತಿಗಳ ನೇಮಕಾತಿಯ ಶೋಧನಾ ಸಮಿತಿಗೆರಾಯಚೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರತಿನಿಧಿಯನ್ನು ನಾಮನಿರ್ದೇಶನಗೊಳಿಸುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಪ್ರಸ್ತುತ ಕುಲಪತಿಗಳ ಅವಧಿಯು ದಿನಾಂಕ: 08.11.2024 ರಂದು ಅಂತ್ಯಗೊಳ್ಳಲಿರುವುದರಿಂದ ಕರ್ನಾಟಕ ಸರ್ಕಾರದ ಪತ್ರ ಸಂ: ಇಡಿ 148 ಯುಜಿವಿ 2024 ದಿನಾಂಕ: 03.10.2024 ಪ್ರಕಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 14(2) ರಡಿಯಲ್ಲಿ ನೂತನ ಕುಲಪತಿಗಳ ನೇಮಕಾತಿಗೆ ಶೋಧನಾ ಸಮಿತಿಯನ್ನು ಸರ್ಕಾರವು ರಚಿಸಬೇಕಾಗಿರುವುದರಿಂದ ಸದರಿ ಸಮಿತಿಗೆ ರಾಯಚೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರತಿನಿಧಿಯನ್ನು ನಾಮನಿರ್ದೇಶನಗೊಳಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿ, ಸದಸ್ಯರ ಹೇಳಿಕೆಯ ಮೇರೆಗೆ ಈ ಕೆಳಕಂಡ ವಿವಿಧ ವಿಶ್ವವಿದ್ಯಾಲಯಗಳ ನಿವೃತ್ತ ಕುಲಪತಿಗಳ ಹೆಸರುಗಳ ಪಟ್ಟಿ ಮಾಡಲಾಯಿತು.<br><br>1. Prof. B.G. Mulimani<br>Formar Vice-Chancellor,<br>Gulbargar University, Kalaburagi<br><br>2. Prof. Pramod B.Gai<br>Formar Vice-Chancellor,<br>Karnataka University, Dharwad<br><br>3. Prof. Jogan Shankar<br>Former Vice-Chancellor,<br>Kuvempu University, Shimoga<br><br>4. Prof. B.V. Patil<br>Former Vice-Chancellor,<br>Agricultural University, Raichur<br><br>5. Prof. Jaffet<br>Former Vice-Chancellor,<br>Bangalore Central University, Bangalore<br><br>6. Prof. Kemparaju<br>Former Vice-Chancellor,<br>Bangalore North University, Bangalore<br><br>7. Prof. S.C. Sharma<br>Former Vice-Chancellor,<br>Tumakur University, Tumakur<br><br>ಈ ಕುರಿತು ದೀರ್ಘ ಕಾಲದ ಚರ್ಚೆಯ ನಂತರ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ರಾಯಚೂರು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ನೇಮಕಾತಿಯ ಶೋಧನಾ ಸಮಿತಿಗೆ<br><br>Prof. B.G. Mulimani<br>Formar Vice-Chancellor,<br>Gulbargar University, Kalaburagi<br><br>ಇವರನ್ನು ನಾಮನಿರ್ದೇಶನಗೊಳಿಸಲಾಯಿತು. |

| | | |
|---|---|---|
| 4 | ರಾಯಚೂರು ವಿಶ್ವವಿದ್ಯಾಲಯದ ವಿವಿಧ ನಿಖಾಯಗಳಿಗೆ ಡೀನರುಗಳನ್ನು ನಾಮನಿರ್ದೇಶನ ಮಾಡುವುದು. | "ಈಗಾಗಲೇ ರಾಯಚೂರು ವಿಶ್ವವಿದ್ಯಾಲಯವು ತನ್ನ ಮಾತೃ ವಿಶ್ವವಿದ್ಯಾಲಯವಾದ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಪಾರ್ವತಿ ಸಿ. ಎಸ್. ಹಾಗೂ ಪ್ರೊ. ಪಿ. ಭಾಸ್ಕರ್ ರವರಿಗೆ ವಿವಿಧ ನಿಖಾಯಗಳ ಡೀನಶಿಪ್‌ನ್ನು ನೀಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ(21)ರ ಅಡಿಯಲ್ಲಿರುವಂತೆ ಕಾರ್ಯವ್ಯವಸ್ಥಿತವಾಗಿ ನಿರ್ವಹಿಸಲು ಆದೇಶಿಸಿತ್ತು. ಸದರಿಯವರ ಎರಡು ವರ್ಷಗಳ ಅವಧಿಯು ದಿನಾಂಕ: 24.07.2024ರಂದು ಮುಗಿದಿದ್ದರಿಂದ, ಮತ್ತು ರಾಯಚೂರು ವಿಶ್ವವಿದ್ಯಾಲಯದಲ್ಲಿ ಆ ಸಂದರ್ಭದಲ್ಲಿ ಯಾವುದೇ ಖಾಯಂ ಬೋಧಕ ಸಿಬ್ಬಂದಿಗಳು ಇದ್ದಿದಿಲ್ಲವಾದ್ದರಿಂದ ದಿನಾಂಕ: 13.09.2024ರಂದು ನಡೆದ ಸಿಂಡಿಕೇಟ್ ಸಭೆಯ ನಡವಳಿ ಸಂಖ್ಯೆ (6) ರಲ್ಲಿ ಮತ್ತೆ ವಿವಿಧ ನಿಖಾಯಗಳ ಡೀನರ ಸ್ಥಾನಕ್ಕೆ ಪ್ರೊ. ಪಾರ್ವತಿ ಸಿ. ಎಸ್. ಹಾಗೂ ಪ್ರೊ. ಪಿ. ಭಾಸ್ಕರ್ ಅವರನ್ನು ಅದೇ ಕಾರ್ಯವ್ಯವಸ್ಥಿತವಾಗಿ ನಿರ್ವಹಿಸಲು ಮರು ನೇಮಿಸಲಾಗಿತ್ತು. ಪ್ರಸ್ತುತ, ರಾಯಚೂರು ವಿಶ್ವವಿದ್ಯಾಲಯಕ್ಕೆ ಮೂರು ಖಾಯಂ ಸಹಪ್ರಾಧ್ಯಾಪಕರು ನೇಮಕಗೊಂಡಿರುತ್ತಾರೆ. ಆದ್ದರಿಂದ, ದಿನಾಂಕ: 13.09.2024ರ ಸಿಂಡಿಕೇಟ್ ಸಭೆಯ ನಡವಳಿ ಸಂಖ್ಯೆ (6) ರ ಮುಂದುವರೆದ ಭಾಗವಾಗಿ, ರಾಯಚೂರು ವಿಶ್ವವಿದ್ಯಾಲಯಕ್ಕೆ ಹೊಸದಾಗಿ ನೇಮಕಾತಿ ಗೊಂಡಿರುವ ಮೂರು ಸಹಪ್ರಾಧ್ಯಾಪಕರುಗಳೂ ಸೇರಿದಂತೆ ವಿವಿಧ ನಿಕಾಯಗಳ ಡೀನ್‌ಶಿಪ್‌ಅನ್ನು ಈ ಕೆಳಗಿನಂತೆ ಮರುಹಂಚಿಕೆ ಮಾಡುವ ಸಂಬಂಧ ಸಿಂಡಿಕೇಟ್ ಸಭೆಯು ಚರ್ಚಿಸಿ ಈ ಕೆಳಗಿನಂತೆ ಮರುಹಂಚಿಕೆ ಮಾಡಲಾಯಿತು.<br>1. **ಶಿಕ್ಷಣ ನಿಕಾಯ ಡೀನರು (ಕಾರ್ಯ ವ್ಯವಸ್ಥಿತವಾಗಿ):**<br>ಡಾ. ಪಾರ್ವತಿ ಸಿ. ಎಸ್.,<br>ಹಿರಿಯ ಪ್ರಾಧ್ಯಾಪಕರು<br>ಉಪಕರಣಾತ್ಮಕ ತಂತ್ರಜ್ಞಾನ ವಿಭಾಗ,<br>ರಾಯಚೂರು ವಿಶ್ವವಿದ್ಯಾಲಯ, ರಾಯಚೂರು<br>2. **ವಾಣಿಜ್ಯ ನಿಕಾಯ ಡೀನರು (ಕಾರ್ಯ ವ್ಯವಸ್ಥಿತವಾಗಿ)**<br>ಡಾ. ಪಿ. ಭಾಸ್ಕರ್,<br>ಹಿರಿಯ ಪ್ರಾಧ್ಯಾಪಕರು<br>ಉಪಕರಣಾತ್ಮಕ ತಂತ್ರಜ್ಞಾನ ವಿಭಾಗ,<br>ರಾಯಚೂರು ವಿಶ್ವವಿದ್ಯಾಲಯ, ರಾಯಚೂರು<br>3. **ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಡೀನರು:**<br>ಡಾ. ಸುಯಮೀಂದ್ರ ಕುಲಕರ್ಣಿ,<br>ಸಹ ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ವಿಭಾಗ,<br>ರಾಯಚೂರು ವಿಶ್ವವಿದ್ಯಾಲಯ, ರಾಯಚೂರು<br>4. **ಕಲಾ ನಿಕಾಯ ಡೀನರು :**<br>ಡಾ. ಲತಾ ಎಂ. ಎಸ್.,<br>ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ,<br>ರಾಯಚೂರು ವಿಶ್ವವಿದ್ಯಾಲಯ, ರಾಯಚೂರು<br>5. **ಸಮಾಜ ವಿಜ್ಞಾನ ನಿಕಾಯ ಡೀನರು :**<br>ಡಾ. ಕುರುಬರ ವೆಂಕಟೇಶ,<br>ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,<br>ರಾಯಚೂರು ವಿಶ್ವವಿದ್ಯಾಲಯ, ರಾಯಚೂರು |

| | | |
|---|---|---|
| 5 | ರಾಯಚೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ಹಾಗೂ ಪ್ರಭಾರಿ ಮುಖ್ಯಸ್ಥರುಗಳನ್ನು ನೇಮಕ ಮಾಡುವಕುರಿತು. | "ಈಗಾಗಲೇ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷ ಸ್ಥಾನಕ್ಕೆ ಪ್ರೊ. ಪಾರ್ವತಿ ಸಿ. ಎಸ್. ಹಾಗೂ ಪ್ರೊ. ಪಿ. ಭಾಸ್ಕರ್ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿತ್ತು (ದಿನಾಂಕ 24.09.2022). ಸದರಿಯವರ ಎರಡು ವರ್ಷಗಳ ಅವಧಿಯು ದಿನಾಂಕ: 23.09.2024ರಂದು ಮುಗಿಯುವುದರಿಂದ, ಮತ್ತು ವಿಶ್ವವಿದ್ಯಾಲಯದಲ್ಲಿ ಯಾವುದೇ ಖಾಯಂ ಬೋಧಕ ಸಿಬ್ಬಂದಿಗಳು ಇಲ್ಲದಿದ್ದ ಕಾರಣ ದಿನಾಂಕ: 13.09.2024ರಂದು ನಡೆದ ಸಿಂಡಿಕೇಟ್ ಸಭೆಯ ನಡವಳಿ ಸಂಖ್ಯೆ (7) ರಲ್ಲಿ ಮತ್ತೆ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷ ಸ್ಥಾನಕ್ಕೆ ಕಾರ್ಯವ್ಯವಸ್ಥಿತವಾಗಿ ನಿರ್ವಹಿಸಲು ಪ್ರೊ. ಪಾರ್ವತಿ ಸಿ. ಎಸ್. ಹಾಗೂ ಪ್ರೊ. ಪಿ. ಭಾಸ್ಕರ್ ಅವರನ್ನು ಮರು ನೇಮಿಸಲಾಗಿತ್ತು. ಪ್ರಸ್ತುತ, ರಾಯಚೂರು ವಿಶ್ವವಿದ್ಯಾಲಯಕ್ಕೆ ಮೂರು ಖಾಯಂ ಸಹಪ್ರಾಧ್ಯಾಪಕರು ನೇಮಕಗೊಂಡಿರುತ್ತಾರೆ. ಆದ್ದರಿಂದ, ದಿನಾಂಕ: 13.09.2024ರ ಸಿಂಡಿಕೇಟ್ ಸಭೆಯ ನಡವಳಿ ಸಂಖ್ಯೆ (7) ರ ಮುಂದುವರೆದ ಭಾಗವಾಗಿ, ರಾಯಚೂರು ವಿಶ್ವವಿದ್ಯಾಲಯಕ್ಕೆ ಹೊಸದಾಗಿ ನೇಮಕಾತಿ ಗೊಂಡಿರುವ ಮೂರು ಸಹಪ್ರಾಧ್ಯಾಪಕರುಗಳೂ ಸೇರಿದಂತೆ ವಿವಿಧ ವಿಭಾಗಗಳ ಅಧ್ಯಕ್ಷರ ಸ್ಥಾನವನ್ನು ಈ ಕೆಳಗಿನಂತೆ ಮರುಹಂಚಿಕೆ ಮಾಡುವ ಸಂಬಂಧ ಸಿಂಡಿಕೇಟ್ ಸಭೆಯು ಚರ್ಚಿಸಿ ಈ ಕೆಳಗಿನಂತೆ ಮರುಹಂಚಿಕೆ ಮಾಡಲಾಯಿತು.<br><br>**1. ಡಾ. ಪಾರ್ವತಿ ಸಿ. ಎಸ್. (ಕಾರ್ಯ ವ್ಯವಸ್ಥಿತವಾಗಿ)**<br>1. ಕನ್ನಡ (ಪ್ರಭಾರ – ಅಧ್ಯಕ್ಷರು)<br>2. ಆಂಗ್ಲ (ಪ್ರಭಾರ – ಅಧ್ಯಕ್ಷರು)<br>3. ಉರ್ದು ಮತ್ತು ಪರ್ಷಿಯನ್ (ಪ್ರಭಾರ– ಅಧ್ಯಕ್ಷರು)<br>4. ವಾಣಿಜ್ಯ (ಪ್ರಭಾರ– ಅಧ್ಯಕ್ಷರು)<br><br>**2. ಡಾ. ಪಿ. ಭಾಸ್ಕರ್ (ಕಾರ್ಯ ವ್ಯವಸ್ಥಿತವಾಗಿ)**<br>1. ಉಪಕರಣಾತ್ಮಕ ತಂತ್ರಜ್ಞಾನ (ಅಧ್ಯಕ್ಷರು)<br>2. ಭೌತಶಾಸ್ತ್ರ (ಪ್ರಭಾರ– ಅಧ್ಯಕ್ಷರು)<br>3. ಗಣಕ ವಿಜ್ಞಾನ (ಪ್ರಭಾರ– ಅಧ್ಯಕ್ಷರು)<br>4. ಗಣಿತ ಶಾಸ್ತ್ರ (ಪ್ರಭಾರ– ಅಧ್ಯಕ್ಷರು)<br><br>**3. ಡಾ. ಸುಯಮೀಂದ್ರ ಕುಲಕರ್ಣಿ**<br>1. ಸೂಕ್ಷ್ಮಜೀವಶಾಸ್ತ್ರ (ಅಧ್ಯಕ್ಷರು)<br>2. ಸಸ್ಯಶಾಸ್ತ್ರ (ಪ್ರಭಾರ– ಅಧ್ಯಕ್ಷರು)<br>3. ಪ್ರಾಣಿಶಾಸ್ತ್ರ (ಪ್ರಭಾರ– ಅಧ್ಯಕ್ಷರು)<br><br>**4. ಡಾ. ಲತಾ ಎಂ.ಎಸ್.,**<br>1. ರಸಾಯನಶಾಸ್ತ್ರ (ಅಧ್ಯಕ್ಷರು)<br>2. ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ (ಪ್ರಭಾರ– ಅಧ್ಯಕ್ಷರು)<br>3. ಮಹಿಳಾ ಅಧ್ಯಯನ (ಪ್ರಭಾರ– ಅಧ್ಯಕ್ಷರು)<br>4. ಸಮಾಜ ಶಾಸ್ತ್ರ (ಪ್ರಭಾರ– ಅಧ್ಯಕ್ಷರು) |

| | | |
|---|---|---|
| | | 5. **ಡಾ. ಕೆ. ವೆಂಕಟೇಶ್,**<br>1. ರಾಜ್ಯಶಾಸ್ತ್ರ (ಅಧ್ಯಕ್ಷರು)<br>2. ಇತಿಹಾಸ (ಪ್ರಭಾರ– ಅಧ್ಯಕ್ಷರು)<br>3. ಸಮಾಜಕಾರ್ಯ (ಪ್ರಭಾರ– ಅಧ್ಯಕ್ಷರು)<br>4. ಅರ್ಥಶಾಸ್ತ್ರ (ಪ್ರಭಾರ– ಅಧ್ಯಕ್ಷರು)<br>5. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ (ಪ್ರಭಾರ– ಅಧ್ಯಕ್ಷರು) |
| 6 | ರಾಯಚೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ನೇಮಕಾತಿ ಅವಧಿಯು ದಿನಾಂಕ: 31.10.2024ರಂದು ಅಂತ್ಯಗೊಳ್ಳಲಿರುವುದರಿಂದ ಅವರನ್ನು ಮುಂದುವರೆಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ನೇಮಕಾತಿ ಅವಧಿಯು ದಿನಾಂಕ: 31.10.2024ರಂದು ಅಂತ್ಯಗೊಳ್ಳಲಿರುವುದರಿಂದ ಹಾಗೂ ಸರ್ಕಾರ ಆದೇಶ ಸಂ: ಇಡಿ 212 ಯುಎನ್ಇ 2024, ಬೆಂಗಳೂರು, ದಿನಾಂಕ: 04.10.2024 ರ ಪ್ರಕಾರ 2025–26ನೇ ಸಾಲಿನ ಸಂಯೋಜನಾ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಎಲ್ಲಾ ವಿಶ್ವವಿದ್ಯಾಲಯಗಳು ಅನುಷ್ಠಾನಗೊಳಿಸಿ ಜಾರಿಗೊಳಸಲು ಸೂಚಿಸಲಾಗಿರುತ್ತದೆ. ಈ ಸಂದರ್ಭದಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಹಾಗೂ ಅನುಭವಿಗಳಾದ ಡಾ. ರಾಘವೇಂದ್ರ ಫತೇಪುರ, ಅವರ ಸೇವೆಯು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯಲ್ಲಿ ಅವಶ್ಯಕವಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಸಿಂಡಿಕೇಟ್ ಸಭೆಯ ಸರ್ವ ಸದಸ್ಯರು ದೀರ್ಘವಾಗಿ ಚರ್ಚಿಸಿ, ಸದರಿಯವರ ಸೇವೆಯನ್ನು ಮುಂದಿನ 11 ತಿಂಗಳುಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲು ಸರ್ವಾನುಮತದಿಂದ ಒಪ್ಪಲಾಯಿತು |
| 7 | ರಾಯಚೂರು ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಯುಯುಸಿಎಂಎಸ್ ತಾಂತ್ರಿಕ ಅಧಿಕಾರಿಗಳ ವೇತನ ಹೆಚ್ಚಿಸುವ ಕುರಿತು. | ದಿನಾಂಕ: 23.10.2024 ರಂದು ಜರುಗಿದ ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ಸಮಿಯಲ್ಲಿ ನಿರ್ಧರಿಸಿದಂತೆ ಪ್ರಸ್ತುತ ಹಣಕಾಸು ವರ್ಷದಲ್ಲಿ ವೇತನ ಹೆಚ್ಚಿಸುವುದು ವಿಶ್ವವಿದ್ಯಾಲಯದ ಆರ್ಥಿಕ ದೃಷ್ಟಿಯಿಂದ ಸಮಂಜಸವಲ್ಲ ಎಂದು ತೀರ್ಮಾನಿಸಿರುವುದರಿಂದ ರಾಯಚೂರು ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಯುಯುಸಿಎಂಎಸ್ ತಾಂತ್ರಿಕ ಅಧಿಕಾರಿಗಳ ವೇತನವನ್ನು ಯಾವುದೇ ಹೆಚ್ಚಳವಿಲ್ಲದೆ ಯಥಾ ರೀತಿ ಮುಂದುವರೆಸಲು ತೀರ್ಮಾನಿಸಲಾಯಿತು. |
| 8 | ರಾಯಚೂರು ವಿಶ್ವವಿದ್ಯಾಲಯದ Draft copy of Statute Governing the Conferring of Honorary Doctorate Degrees During Annual Convocation ಅನುಮೋದನೆ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ Draft copy of Statute Governing the Conferring of Honorary Doctorate Degrees During Annual Convocation ಅನುಮೋದನೆ ಮಾಡಲಾಗಿ ಸರ್ಕಾರಕ್ಕೆ ಹಾಗೂ ಕುಲಾಧಿಪತಿಯವರಿಗೆ ಇದನ್ನು ಕಳುಹಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

| | | |
|---|---|---|
| 9 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ.<br><br>1. ರಾಯಚೂರು ವಿಶ್ವವಿದ್ಯಾಲಯದ ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗುತ್ತಿರುವ ಕುರಿತು.<br><br>2. ಕರ್ನಾಟಕ ಸರ್ಕಾರ ಆದೇಶದಂತೆ, ಕಾಲೇಜು ಮುಂದುವರಿಕೆ, ಸಂಲಗ್ನತೆ ಹೊಂದ ಬೇಕಾದರೆ ಶೇ. 45 ರಷ್ಟು ಪ್ರತಿಶತ ಅಂಕಗಳನ್ನು ಸ್ಥಳೀಯ ವಿಚಾರಣಾ ಸಮಿತಿ (LIC) ಶಿಫಾರಸ್ಸು ಹೊಂದಿರಬೇಕು. | 1. ರಾಯಚೂರು ವಿಶ್ವವಿದ್ಯಾಲಯದಲ್ಲಿರುವ ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯು ಕಡಿಮೆಯಾಗುತ್ತಿರುವುದನ್ನು ಗಮನಿಸಿರುವ ವಿಶ್ವವಿದ್ಯಾಲಯವು ಸದರಿ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸುವ ಸಂಬಂಧ ಚರ್ಚಿಸಿಲಾಗಿ ವಿಭಾಗದ ಲ್ಯಾಬಿರೆಟರಿಯನ್ನು ಉನ್ನತೀಕರಿಸುವುದು ಎಂದು ತೀರ್ಮಾನಿಸಲಾಯಿತು ಹಾಗೂ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯ ಹೆಚ್ಚಳಕ್ಕೆ ಅಗತ್ಯ ಕ್ರಮವನ್ನು ವಿಭಾಗದಲ್ಲಿರುವ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರುಗಳು ವಹಿಸಬೇಕೆಂದು ಹಾಗೆಯೇ ಈ ಕೆಲಸಗಳನ್ನು ಮುಂದಿನ 02 ವರ್ಷಗಳಲ್ಲಿ ಮಾಡಬೇಕೆಂದು ತಿಳಿಸಲು ತೀರ್ಮಾನಿಸಿ ಸಿಂಡಿಕೇಟ್ ಸಭೆಯು ನಿರ್ಣಯಿಸಿತು.<br><br>2. ಸರ್ಕಾರ ಆದೇಶ ಸಂ: ಇಡಿ 212 ಯುಎನ್‌ಇ 2024, ಬೆಂಗಳೂರು, ದಿನಾಂಕ: 04.10.2024 ರ ಪ್ರಕಾರ 2025–26ನೇ ಸಾಲಿನ ಸಂಯೋಜನಾ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಎಲ್ಲಾ ವಿಶ್ವವಿದ್ಯಾಲಯಗಳು ಅನುಷ್ಠಾನಗೊಳಿಸಿ ಜಾರಿಗೊಳಸಲು ಸೂಚಿಸಲಾಗಿರುತ್ತದೆ. ಸರ್ಕಾರದ ಆದೇಶದ ಅನುಸಾರ ಕಾಲೇಜು ಮುಂದುವರಿಕೆ, ಸಂಲಗ್ನತೆ ಹೊಂದ ಬೇಕಾದರೆ ಶೇ. 45 ರಷ್ಟು ಪ್ರತಿಶತ ಅಂಕಗಳನ್ನು ಸ್ಥಳೀಯ ವಿಚಾರಣಾ ಸಮಿತಿ (LIC) ಶಿಫಾರಸ್ಸು ಅವಶ್ಯಕವಾಗಿರುತ್ತದೆ. ಕಾರಣ ರಾಯಚೂರು ಮತ್ತು ಯಾದಗಿರಿ ನಗರದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳ ಉತ್ತಮ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ರಾಯಚೂರು ವಿಶ್ವವಿದ್ಯಾಲಯಕ್ಕೆ ಒಳಪಡುವ ಕಾಲೇಜುಗಳ ಸಂಲಗ್ನತೆಯನ್ನು ಮುಂದುವರೆಸಬೇಕಾದಾಗ ಕಡ್ಡಾಯವಾಗಿ ಶೇ. 45 ಅಂಕಗಳನ್ನು ತೆಗೆದುಕೊಂಡಿರುವ ಕಾಲೇಜುಗಳಿಗೆ ಮಾತ್ರ ಸಂಲಗ್ನತೆಯನ್ನು ನೀಡುವುದು ಶೇ. 45 ಅಂಕಗಳಿಗಿಂದ ಕಡಿಮೆ ಪಡೆದಿರುವ ಕಾಲೇಜುಗಳ ಮುಂದುವರಿಕೆಯನ್ನು ಸ್ಥಗಿತಗೊಳಿಸುವುದು ಎಂದು ಸಿಂಡಿಕೇಟ್ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಈ ನಿಟ್ಟಿನಲ್ಲಿ ಈ ಹಿಂದೆ ತೆಗೆದುಕೊಂಡ ನಿರ್ಣಯಗಳನ್ನು ಹಿಂತೆಗೆದುಕೊಂಡು (Suppress) ಶೇ 45 ಪ್ರತಿಶತಃ ತೆಗೆದುಕೊಂಡ ಕಾಲೇಜುಗಳಿಗೆ ಮಾತ್ರ ಸಂಲಗ್ನತೆಯನ್ನು ನೀಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | |
|---|---|---|
| | 3. ಪರೀಕ್ಷಾ ವಿಭಾಗದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು (UUCMS) ತಂತ್ರಾಂಶ ಅಳವಡಿಸಿದ್ದರಿಂದ ತಾಂತ್ರಿಕ ಸಂಯೋಜಕರನ್ನು (Technical Co-ordinators), ಹಣಕಾಸು ವಿಭಾಗದಲ್ಲಿ ಅಕೌಟೆಂಟ್ (Accountant) ಹಾಗೂ ಟೆಂಡರ್ ಅಧಿಕಾರಿ (Tender Officer / e-Procurement Officer) ರವರನ್ನು ಮತ್ತೊಂದು ಅವಧಿಗೆ ಮುಂದುವರೆಸುವ ಕುರಿತು. | 3. ರಾಯಚೂರು ವಿಶ್ವವಿದ್ಯಾಲಯವು ನೂತನವಾಗಿ ಸ್ಥಾಪನೆಯಾಗಿದ್ದು, ಸದರಿ ವಿಶ್ವವಿದ್ಯಾಲಯಕ್ಕೆ ಇಲ್ಲಿಯವರೆಗೂ ಯಾವುದೇ ಖಾಯಂ ಸಿಬ್ಬಂದಿಗಳು ನೇಮಕವಾಗದೇ ಇರುವುದರಿಂದ ವಿಶ್ವವಿದ್ಯಾಲಯದ ಆಡಳಿತ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯಕ್ಕೆ ಅತ್ಯವಶ್ಯಕಾಗಿರುವ ಕಾರ್ಯಗಳಿಗೆ ತಾತ್ಕಾಲಿಕವಾಗಿ ಸಿಬ್ಬಂದಿಗಳನ್ನು ಸದರಿಯವರ ವಿದ್ಯಾರ್ಹತೆಗಳಿಗೆ ಅನುಗುಣವಾಗಿ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಾಗಿರುತ್ತದೆ. ವಿವರ ಈ ಕೆಳಗಿನಂತಿದೆ.<br>1. ಕರ್ನಾಟಕ ರಾಜ್ಯ ಸರ್ಕಾರವು (UUCMS) ತಂತ್ರಾಂಶ ಅಳವಡಿಸಿದ್ದರಿಂದ ಪರೀಕ್ಷಾ ಕಾರ್ಯಗಳನ್ನು (UUCMS) ತಂತ್ರಾಂಶದ ಮುಖಾಂತರವೇ ನಿರ್ವಹಿಸುವುದರಿಂದ ಸದರಿ ಕಾರ್ಯಕ್ಕೆ ಕಂಪ್ಯೂಟರ್ ಸಾಫ್ಟ್‌ವೇರ್ ಅನುಭವವುಳ್ಳ ಸಿಬ್ಬಂದಿಗಳ ಅವಶ್ಯಕತೆ ಇರುವುದರಿಂದ ಕುಲಸಚಿವರ ಆದೇಶ ಸ: ರಾವಿರಾ/ಆಡಳಿತ/ತಾ.ಸಂ.ನೇ/2023–24/1083 ದಿನಾಂಕ: 29.11.2023 ನಾಲ್ಕು ಜನ ತಾಂತ್ರಿಕ ಸಂಯೋಜಕರನ್ನು (1. ಕು. ರೇಖಾ ಪಾಟೀಲ್ 2. ಶ್ರೀ. ಸಾಗರ್ ಕುಲಕರ್ಣಿ 3. ಶ್ರೀಮತಿ. ಸಪ್ನಾ ಶುಕ್ಲಾ, 4. ವೃಷಬೇಂದ್ರ ಮಾಲಿಪಾಟೀಲ್) ನೇಮಿಸಿಕೊಳ್ಳಲಾಗಿರುತ್ತದೆ. ಹಾಗೂ ಸದರಿಯವರು ದಿನಾಂಕ: 01.12.2023 ರಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.<br>2. ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಲೆಕ್ಕ ಪತ್ರಗಳ ಕಾರ್ಯ ನಿರ್ವಹಿಸಲು ಯಾವುದೇ ಖಾಯಂ ಸಿಬ್ಬಂದಿಗಳು ಇಲ್ಲದೇ ಇರುವುದರಿಂದ ಅಕೌಂಟೆಂಟ್‌ನ ಅವಶ್ಯಕತೆ ಇರುವುದರಿಂದ ಕುಲಸಚಿವರ ಆದೇಶ ಸಂ: ರಾವಿರಾ/ಆಡಳಿತ/ಸಂಯೋಜಕರ ನೇಮಕ/2023–24/44 ದಿನಾಂಕ: 02.04.2024 ಪ್ರಕಾರ ದಿನಾಂಕ: 01.12.2023 ರಿಂದ ಪೂರ್ವಾನ್ವಯವಾಗುವಂತೆ ಶ್ರೀಮತಿ. ವಿಜಯಲಕ್ಷ್ಮೀ ಇವರನ್ನು ಅಕೌಂಟೆಂಟ ಆಗಿ ಕಾರ್ಯ ನಿರ್ವಹಿಸಲು ನೇಮಿಸಿಕೊಳ್ಳಲಾಗಿರುತ್ತದೆ. ಹಾಗೂ ಸದರಿಯುವರು ದಿನಾಂಕ: 01.12.2023 ರಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.<br>3. ಸರ್ಕಾರದ ನಿರ್ದೇಶನುಸಾರ ವಿಶ್ವವಿದ್ಯಾಲಯದ ಇ–ಪ್ರೊಕ್ಯೂರ್‌ಮೆಂಟ್ ಸೆಲ್ ನ ಮುಖಾಂತರ ಬೃಹತ್ ಖರೀದಿ ಪ್ರಕ್ರಿಯೆಯನ್ನು ಮಾಡಬೇಕಾಗಿರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಸೆಲ್ ನಲ್ಲಿ ಇ–ಟೆಂಡರ್ ಪ್ರೊಸೆಸ್ ಹಾಗೂ ಡಾಕ್ಯುಮೆಂಟೇಷನ್ ಕಾರ್ಯಗಳನ್ನು ಕೈಗೊಳ್ಳಲು ಕುಲಸಚಿವರ ಆದೇಶ ಸಂ: |

| | | |
|---|---|---|
| | | ರಾವಿರಾ/ಆಡಳಿತ/ಎಂಪ್ಯಾನಲ್/2023–24/786 ದಿನಾಂಕ:05.10.2023 ಪ್ರಕಾರ ದಿನಾಂಕ: 03.10.2023 ರಿಂದ ಪೂರ್ವಾನ್ವಯವಾಗುವಂತೆ ಒಬ್ಬ ಇ–ಪ್ರೊಕ್ಯೂರ್‌ಮೆಂಟ್ ಅಧಿಕಾರಿಯನ್ನಾಗಿ ಕಾರ್ಯ ನಿರ್ವಹಿಸಲು ಡಾ. ಲಕ್ಷ್ಮೀಕಾಂತ ರಾಮಕೃಷ್ಣ ಇವರನ್ನು ನೇಮಿಸಿಕೊಳ್ಳಲಾಗಿರುತ್ತದೆ. ಹಾಗೂ ಸದರಿಯುವರು ದಿನಾಂಕ: 03.10.2023 ರಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.<br>ಮೇಲಿನ ಎಲ್ಲಾ ತಾತ್ಕಾಲಿಕ ಸಿಬ್ಬಂದಿಗಳ ಸೇವೆಯು ವಿಶ್ವವಿದ್ಯಾಲಯಕ್ಕೆ ಅವಶ್ಯಕತೆಯಾಗಿರುವುದನ್ನು ಸಿಂಡಿಕೇಟ್ ಸಭೆಯು ಗಮನದಲ್ಲಿಟ್ಟುಕೊಂಡು ಸದರಿಯವರ ಸೇವೆಯನ್ನು ಮುಂದಿನ 11 ತಿಂಗಳುಗಳವರೆಗೆ ಹಾಗೂ ಮುಂದಿನ ಆದೇಶದವರೆಗೆ ಈ ಹಿಂದಿನ ವೇತನವನ್ನೇ ಮುಂದುವರೆಸುಲು ತಿಳಿಸುತ್ತಾ ಸಭೆಯು ಸರ್ವಾನುಮತದಿಂದ ತನ್ನ ಅನುಮೋಧನೆಯನ್ನು ನೀಡಿತು. |
| | 4. ರಾಯಚೂರು ವಿಶ್ವವಿದ್ಯಾಲಯದ ವತಿಯಿಂದ 2024–25ನೇ ಸಾಲಿನಲ್ಲಿ ಏಕವಲಯ ಮತ್ತು ವಿಶ್ವವಿದ್ಯಾಲಯದ ತಂಡದ ಆಯ್ಕೆಯನ್ನು ಆಯೋಜಿಸಲು ವಂತಿಗೆ ಹಣ ನಿಗದಿ ಪಡಿಸುವ ಕುರಿತು. | 4. ರಾಯಚೂರು ವಿಶ್ವವಿದ್ಯಾಲಯದ ವತಿಯಿಂದ 2024–25ನೇ ಸಾಲಿನಲ್ಲಿ ಏಕವಲಯ ಮತ್ತು ವಿಶ್ವವಿದ್ಯಾಲಯದ ತಂಡದ ಆಯ್ಕೆಯನ್ನು ಆಯೋಜಿಸುವ ಪ್ರತಿ ಮಹಾವಿದ್ಯಾಲಯಗಳಿಗೆ ವಿಶ್ವವಿದ್ಯಾಲಯದಿಂದ ವಂತಿಗೆ ಹಣ ನಿಗದಿಪಡಿಸುವುಕ್ಕೆ ಸಂಬಂಧಿಸಿದಂತೆ, 2023–24ನೇ ಸಾಲಿಗೆ ಸಂಬಂಧಿಸಿದಂತೆ, ದಿನಾಂಕ: 09.11.2023ರ ಸಿಂಡಿಕೇಟ್ ಸಭೆಯ ಐಟಂ ಸಂ: 13 ಮಾನ್ಯ ಕುಲಪತಿಗಳ ಅನುಮತಿಯ ಮೇರೆಗೆ ಟೇಬಲ್ ಅಜೆಂಡಾ ಐಟಂ ಸಂ: 2 ಮತ್ತು 3 ರಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ ಪ್ರತಿ ಪಂದ್ಯಕ್ಕೆ ರೂ. 20,000=00 ಹಣ ನಿಗದಿ ಪಡಿಸಲು ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಭಾಗವಹಿಸುವ ತರಬೇತುದಾರರಿಗೆ ಹಾಗೂ ಕ್ರೀಡಾಪಟುಗಳಿಗೆ ದಿನಭತ್ಯೆಗೆ ಸಂಬಂಧಿಸಿದಂತೆ, ಒಂದು ದಿನಕ್ಕೆ ರೂ. 1000 ತರಬೇತುದಾರರಿಗೆ ಹಾಗೂ ಒಂದು ದಿನಕ್ಕೆ ರೂ. 500 ಕ್ರೀಡಾಪಟುಗಳಿಗೆ ಎಂಬುದನ್ನು ಯಾವುದೇ ಬದಲಾವಣೆ ಇಲ್ಲದೆ ಮುಂದಿನ 2024–25ರ ವರ್ಷಕ್ಕೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತನ್ನ ಅನುಮೋಧನೆ ನೀಡಿತು |
| | 5. 2024–25ನೇ ಸಾಲಿನ ಪಿಜಿ (PG) ಪ್ರವೇಶತಿಯ ಸಂಯೋಜಿತ ಮಹಾವಿದ್ಯಾಲಯಗಳ ಬೋದನಾ ಶುಲ್ಕ ಹೆಚ್ಚಿಸುವ ಕುರಿತು. | 5. 2024–25ನೇ ಸಾಲಿನ ಪಿಜಿ (PG) ಪ್ರವೇಶಾತಿಯ ಸಂಯೋಜಿತ ಮಹಾವಿದ್ಯಾಲಯಗಳ ಬೋದನಾ ಶುಲ್ಕವನ್ನು ಹೆಚ್ಚಿಸುವ ಕುರಿತು ಸುದೀರ್ಘವಾಗಿ ಚರ್ಚಿಸಿ ಸಂಯೋಜಿತ ಮಹಾವಿದ್ಯಾಲಯಗಳ ಬೋದನಾ ಶುಲ್ಕವನ್ನು ಯತಾ ರೀತಿ ಮುಂದುವರೆಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

| | | |
|---|---|---|
| | 6. ಪರೀಕ್ಷಾ ವಿಭಾಗ ಮತ್ತು ಭೋದಕರಿಗೆ ಕಚೇರಿ (Chamber) ಕೊಠಡಿಗಳ ಕುರಿತು. | 6. ಪರೀಕಾ ವಿಭಾಗ ಮತ್ತು ಭೋದಕರಿಗೆ ಕಛೇರಿ (Chamber) ಕೊಠಡಿಗಳ ನಿರ್ಮಾಣಕ್ಕೆ ಸಂಬಂಧಸಿದಂತೆ ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾಲಯದಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುವ ಈ ಸಿವಿಲ್ ಹಾಗೂ ಪಾರ್ಟೇಶನ್ ಕಾಮಗಾರಿಗಳನ್ನು ಸರ್ಕಾರದ ಸುತ್ತೋಲೆ ಹಾಗೂ ನಿರ್ದೇಶನದನುಸಾರ ಕೈಗೊಳ್ಳಲು ಅನುಮೊದಿಸಿತು. |
| | 7. ರಾಯಚೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವ ಧನ ಹೆಚ್ಚಿಸುವ ಕುರಿತು | 7. ದಿನಾಂಕ: 12.07.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ಐಟಂ ಸಂ: 08 ರಲ್ಲಿಯ ನಿರ್ಣಯದಲ್ಲಿ ಪೂರ್ಣ ಕಾಲಿಕ ಮತ್ತು ಅರೇ ಕಾಲಿಕ ಅತಿಥಿ ಉಪನ್ಯಾಸಕರುಗಳಿಗೆ ರೂ. 2,000=00 ವೇತನವನ್ನು ಹೆಚ್ಚಿಸುವ ಸಂಬಂದ ಅನುಮೋದಿಸಲಾಯಿತು ಮತ್ತು ಮುಂಬರುವ ಹಣಕಾಸು ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ತೀರ್ಮಾನಿಸಲಾಗಿತ್ತು. ಈ ಸಂಬಂಧ ದಿನಾಂಕ: 23.10.2024 ರಂದು ಜರುಗಿದ ಹಣಕಾಸು ಸಮಿತಿಯಲ್ಲಿ ಐಟಂ ಸಂ: 06 ರಲ್ಲಿಯ ನಿರ್ಣಯದಲ್ಲಿ ಸದ್ಯದ ಆರ್ಥಿಕ ಪರಿಸ್ಥಿಯನ್ನು ಗಮನಿಸುತ್ತಾ ಅತಿಥಿ ಉಪನ್ಯಾಸಕರುಗಳ ಗೌರವ ಧನ ಹೆಚ್ಚಿಸುವುದನ್ನು ಕೈಬಿಡಲಾಯಿತು. ಈ ವಿಷಯವಾಗಿ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ದಿನಾಂಕ: 12.07.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಹಿಂಪಡೆದು ಅತಿಥಿ ಉಪನ್ಯಾಸಕರುಗಳ ಗೌರವ ಧನ ಹೆಚ್ಚಿಸುವ ವಿಷಯವನ್ನು ಕೈಬಿಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

**(ಡಾ. ಶಂಕರ ವ್ಹಿ., )**
ಕೆ.ಎ.ಎಸ್.,(ಆಯ್ಕೆ ಶ್ರೇಣಿ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**(ಪ್ರೊ. ಹರೀಶ್ ರಾಮಸ್ವಾಮಿ)**
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು